ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 4, January- February 2025, Pp. 7-17
©*IIMRD*, Mysuru

IIMRD JOURNALS
www.iimrd.com

# ಶಾಸನಗಳಲ್ಲಿ ಬನವಾಸಿ ವರ್ಣನೆ ಮತ್ತು ಸ್ಥಳನಾಮದ ನಿಷ್ಪತ್ತಿ

**ಶಂಭುಲಿಂಗನಗೌಡ ಬೆಳಕೇರಿ**
ಸಂಶೋಧನಾ ವಿದ್ಯಾರ್ಥಿ, ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಸಾರಾಂಶ: (Abstract)**

*ಶಿರಸಿ ತಾಲೂಕಿನ ಒಂದು ಭಾಗವಾದ ಬನವಾಸಿಯು ಮೊದಲೊಮ್ಮೆ ಪ್ರಾಚೀನ ಕದಂಬರ ವೈಭವಯುತವಾದ ರಾಜಧಾನಿಯಾಗಿತ್ತೆಂಬುದು ಐತಿಹಾಸಿಕ ಸತ್ಯವಾಗಿದೆ."ಬನವಾಸಿ ಬಹುಶಃ ಪ್ರಾಚೀನ ಕನ್ನಡ ನಾಡಿನ ಸಂಸ್ಕೃತಿಯ ಕೇಂದ್ರ ಪಟ್ಟಣ" ಎಂದು ಎಂ.ಬಿ.ನೇಗಿನಾಳ ಸಂಶೋಧಕರು ಹೇಳಿದ ಮಾತು ಬನವಾಸಿ ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಗೆ ಸಾಕ್ಷಿಯಾಗಿದೆ. ಕನ್ನಡ ನಾಡಿನಲ್ಲಿ ಅನೇಕ ಸಂಸ್ಕೃತಿಯ ಕೇಂದ್ರಗಳು ಇವೆ. ಅಂತಹ ಕೇಂದ್ರಗಳಲ್ಲಿ ಬನವಾಸಿಯು ಒಂದು. ಸಾಹಿತ್ಯ–ಸಂಸ್ಕೃತಿಗಳ ಕಣಜವಾದ ಬನವಾಸಿ ಬಹುಶಃ ಎಲ್ಲರಿಗೂ ಚಿರಪರಿಚಿತವಾಗಿದೆ. ಕಾರಣವೆನೆಂದರೆ ಅದು ನಾಡಿನ ಸಂಸ್ಕೃತಿಯ ಮೂಲ ಕೇಂದ್ರಗಳಲ್ಲಿ ಪ್ರಮುಖವಾಗಿದೆ. ಪ್ರಸ್ತುತದಲ್ಲಿ ಬನವಾಸಿಯ ಬಣ್ಣನೆಗಳಿರುವ ಕೆಲವು ಶಾಸನಗಳನ್ನು ಮಾತ್ರ ಪರಿಶೀಲಿಸುವ ಪ್ರಯತ್ನ ಮಾಡಲಾಗಿದೆ.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ಶಾಸನಗಳು, ಬನವಾಸಿ, ಸ್ಥಳನಾಮದ ನಿಷ್ಪತ್ತಿ.

## ಪೀಠಿಕೆ

ಮೌರ್ಯ ಶಾತವಾಹನರ ಕಾಲದಿಂದ ಹಿಡಿದು ಸೋದೆ ಅರಸರ ಕಾಲದವರೆಗಿನ ನೂರಾರು ಶಾಸನಗಳಲ್ಲಿ ರಾಮಾಯಣ, ಮಹಾಭಾರತ, ಬೃಹತ್ ಸಂಹಿತ ಪುರಾಣ, ಮಹಾವಂಶ, ಪಂಪಭಾರತ ಪ್ರಭುಲಿಂಗಲೀಲೆ ಮುಂತಾದ ಸಾಹಿತ್ಯಕ ಆಕರಗಳಲ್ಲಿ ಮತ್ತು ಟಾಲೆಮಿ, ಅಲ್ಬೆರೂನಿ, ಪೀಟ್ ಮೊದಲಾದ ವಿದೇಶಿಯರ ಬರವಣಿಗೆಗಳಲ್ಲಿ ಬಗೆ ಬಗೆಯಾಗಿ ಬನವಾಸಿಯು ಬಣ್ಣಿಸಲ್ಪಟ್ಟಿದೆ. ಇವೆಲ್ಲವುಗಳ ಸಮಗ್ರ ಸಮೀಕ್ಷೆಯನ್ನು ಈಗ ಕೈಕೊಳ್ಳಬೇಕಾದ ಅಗತ್ಯವಿದ್ದಂತೆ ತೋರುತ್ತದೆ. ಅದರಲ್ಲೂ ಬನವಾಸಿಯ ಗತವೈಭವದ ಹಿರಿಮೆಯನ್ನು ಅರಿಯಬೇಕೆಂದೆನಿಸಿದಾಗೆಲ್ಲ, ಇಂಥ ಒಂದು ಅಧ್ಯಯನವು ಅತ್ಯಗತ್ಯವಿದೆಯೆನಿಸುತ್ತದೆ. ಪ್ರಸ್ತುತದಲ್ಲಿ ಬನವಾಸಿಯ ಬಣ್ಣನೆಗಳಿರುವ ಕೆಲವು ಶಾಸನಗಳನ್ನು ಮಾತ್ರ ಪರಿಶೀಲಿಸುವ ಪ್ರಯತ್ನ ಮಾಡಲಾಗಿದೆ. "ಬನವಾಸಿ"ಈ ಹೆಸರಿನ ಉಗಮ ಮತ್ತು ಪ್ರತಿನಾಮಗಳು ನಿಜಕ್ಕೂ ಕುತೂಹಲಕಾರಿಯಾಗಿದೆ. ಖ್ಯಾತ ನಿಘಂಟು ಶಾಸ್ತ್ರಜ್ಞ ಕಿಟಲ್‌ರವರು ಅಧಿಕೃತವಾಗಿ ಇದನ್ನು ತಮ್ಮ

ನಿಘಂಟಿನಲ್ಲಿ ಉಲ್ಲೇಖಿಸಿದ್ದಾರೆ.[೧] ಅವರ ಪ್ರಕಾರ ಬನವಾಸಿಯು ಬನ (=ವನ) ಮತ್ತು 'ಬಸಿ' 'ಬಸೆ'ಗಳಿಂದ (spring) ಕೂಡಿದೆ.

(ಬನವಾಸಿ–a forest spring). ವನವಾಸಿ, ವನವಸಕ ಎಂಬುದು ಅದರ ಸಂಸ್ಕೃತ ರೂಪ. ಡಾ. ಫ್ಲೀಟರು ತಿಳಿಸುವಂತೆ ಬನವಾಸಿಯು ಸಂಸ್ಕೃತದ 'ವನವಾಸ'ದ ಕನ್ನಡ ರೂಪಾಂತರವಾಗಿದ್ದರೂ ಇರಬಹುದು[೨] ಬನವಾಸಿ ಪ್ರದೇಶವನ್ನು ನೋಡಿದಾಗ ಬನವಾಸಿ ಪ್ರದೇಶದ ವನಸಿರಿ, ಕೆರೆಕಟ್ಟೆ ನದಿ, ಅರಣ್ಯಗಳನ್ನು ನೋಡಿದ ಯಾರಿಗೆ ಆಗಲಿ ಆ ಸ್ಥಳನಾಮವು ಅದಕ್ಕೆ ಸರಿಯಾಗಿ ಅನ್ವರ್ಥವಾಗಿದೆಯೆಂದು ಅನ್ನಿಸತ್ತದೆ. ಅಂತೆಯೇ ಪಂಪ "ಆವನನ್ದ ನವನಂಗಳೊಳಂ ಬನವಾಸಿ ದೇಶದೊಳ್' ಎಂದದ್ದು. ಕನ್ನಡ ನಾಡಿನ ಹಲವಾರು ಶಾಸನಗಳೂ ಈ ಮಾತನ್ನು ಪುಷ್ಟಿಕರಿಸುತ್ತವೆ.

**ಬನವಾಸಿಗೆ ಇರುವ ವಿವಿಧ ಸ್ಥಳನಾಮಗಳು**

ನಾಡಿನ ಅನೇಕ ಶಾಸನಗಳಲ್ಲಿ ವಜಯತಿ, ವೆಜಯಂತಿ ವಿಜಯಂತ, ವೈಜಯಂತೀ, ವಿಜಯನ್ವೈಜಯಂತೀ ಜಯಂತಿ, ಜಯಂತೀಪುರ ಸಂಜಯತಿ, ಸಂಜಯಂತೀ, ವನವಸ, ವನವಾಸಿ, ಬನವಸೆ ಬನವಸಿ, ಬನವಸೆಯ ಕೋಟೆ ಕನಕಾಪುರ ಮುಂತಾದವು 'ಬನವಾಸಿ'ಗೆ ಈ ಹಿಂದೆ ಇದ್ದ ಪ್ರತಿನಾಮಗಳು ಇಲ್ಲವೆ ಪತ್ಯಾಯನಾಮಗಳಿಗೆ ಆಧಾರವಾಗಿ ನಿಲ್ಲುತ್ತವೆ. ಇನ್ನು ಭಾರತಕ್ಕೆ ಆಗಮಿಸಿದ ವಿದೇಶೀ ಪ್ರವಾಸಿಗರು ಸಹ ಬನವಾಸಿಯನ್ನು ಬೇರೆ ಬೇರೆ ನಾಮದಿಂದ ತಮ್ಮ ಪ್ರವಾಸ ಸಾಹಿತ್ಯದಲ್ಲಿ ಉಲ್ಲೇಖ ಮಾಡಿದ್ದರೆ.ಅದರಲ್ಲಿ ಟಾಲೆಮಿಯು ಬನವಾಸಿಯನ್ನು "ಬನೌಸಿ" (Banaousei),[3] "ಬೈಜಂತಿಯೋನ್" ಎಂದು ಮುಂತಾಗಿ ಬಣ್ಣಿಸಿದ್ದಾರೆ. ನಂತರ ಇನ್ನೊಬ್ಬ ಚೀನಿ ಪ್ರವಾಸಿಗ ಹುಯೆನ್‌ತ್ಸಾಂಗನು "ಕೊನ್–ಕಿನ್–ನ–ಪು–ಲೊ ಉಲ್ಲೇಖಿಸಿದ್ದುಂಟು.[೪] " ಮಹಾಭಾರತದಲ್ಲಿ ಬನವಾಸಿಯನ್ನು "ವನವಾಸಿಕ" ಎಂಬ ಉಲ್ಲೇಖವು ಅತ್ಯಂತ ಪ್ರಾಚೀನವಾಗಿದೆ. ಪರುಶುರಾಮ ಸೃಷ್ಟಿಯೆನಿಸಿದ ಪಶ್ಚಿಮ ಘಟ್ಟದಲ್ಲಿಯ ಬನವಾಸಿ, ಗೋಕರ್ಣ,ಯಾಣ, ದಾಂಡೇಲಿ, ಸುಪಾ ಮೊದಲಾದ ಸ್ಥಳಗಳನ್ನು ರಾಮಾಯಣ ಮಹಾಭಾರತದಲ್ಲಿ ಉಲ್ಲೇಖಿಸಲಾಗಿದೆ. ಈ ರೀತಿಯಲ್ಲಿ ವಿವಿಧ ಹೆಸರಿನಿಂದ ಕರೆಯಲ್ಪಟ ಬನವಾಸಿಯ ಸ್ಥಳ ನಾಮದ ನಿಷ್ಪತ್ತು ನಿರ್ಣಯ ಮತ್ತು ಶಾನಗಳಲ್ಲಿ, ಕಾವ್ಯಗಳಲ್ಲಿಯ ಬನವಾಸಿಯ ವರ್ಣನೆಯನ್ನು ಸಾದರ ಪಡಿಸುವ ಪ್ರಯತ್ನ ಮಾಡಲಾಗಿದೆ.

**ಸ್ಥಳನಾಮದ ನಿಷ್ಪತ್ತಿ**

ವನವಸೆ> ವನವಾಸೆ> ಬನವಸೆ> ಬನವಾಸೆ

ಇಲ್ಲಿ ಬನವಾಸಿಯ ಶಾಸನೋಕ್ತ ಸ್ಥಳನಾಮ "ವನವಸೆ"

---

೧. Kittel's Kannada-English Dictionary, Vol. III, Madras, 1970, p. 1139

೨. Fleet, Bombay Gazetteer, Vol. I-II, p. 278, n. 2,

೩. ಎಚ್.ಎಲ್. ನಾಗೆಗೌಡ ಪ್ರವಾಸಿಖಂಡ ಇಂಡಿಯಾ (ಸಂ–೧) ಪುಟ–೧೧೯.

೪. ಅದೇ.(ಸಂ–೧) ಪುಟ –೧೨೦.

**ನಿಷ್ಪತ್ತಿ--೧**

ವನ + ವಸೆ

ವನ ಎಂದರೆ "ಕಾಡು."[೫]

**ನಿಷ್ಪತ್ತಿ--೨**

ಬನ + ವಾಸೆ

ಬನ ಎಂದರೆ "೧.ಕಾಡು; ಅರಣ್ಯ. ೨. ತೋಟ; ಉದ್ಯಾನ. ೩. ಮರಗಳ ಗುಂಪು; ತೋಪು "[೬]

ಸ್ಥಳನಾಮದ ನಿಷ್ಪತ್ತಿಯ ಪ್ರಕಾರ ಬನವಾಸಿಯು "ಕಾಡಿನಿಂದ ಕೂಡಿದ ಪ್ರದೇಶ" ಎಂದರ್ಥ. ಕಾಡು ಎಂದಾ ಕ್ಷಣ ಮರ ಗಿಡ ಅತಿ ಹೆಚ್ಚಾಗಿ ಕಂಡು ಬರುವುದು, ಪ್ರಾಣಿಗಳು ಪಕ್ಷಿಗಳ ಕಲರವ, ನದಿಯ ಜುಳು ಜುಳು ನಾದ, ಇವೆಲ್ಲವನ್ನು ಒಳಗೊಂಡಿರುತ್ತದೆ. ಅದೇ ರೀತಿಯಲ್ಲಿ ಬನವಾಸಿ ಪರಿಸರವನ್ನು ಅವಲೋಕನ ಮಾಡಿದಾಗ ಸ್ಥಳನಾಮದ ನಿಷ್ಪತ್ತಿಯ ಹಾಗೆ ಕಂಡು ಬಂದಿದೆ. ಅದಕ್ಕೆ ಪಂಪ ತನ್ನ ವಿಕ್ರಮಾರ್ಜುನ ಕಾವ್ಯದಲ್ಲಿ ಬನವಾಸೆಯ ಕುರಿತು

***ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ ಪೂತ ಜಾತಿ ಸಂ***
***ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಮೊಗಂ ।***
***ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಡಾವ ಬೆ***
***ಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿ ದೇಶದೊಳ್ ॥*[೭]**

ಈ ಪದ್ಯದಲ್ಲಿ ಪಂಪ ಬನವಾಸೆಯ ಸುತ್ತ ಮುತ್ತಲಿನ ಪರಿಸರವನ್ನು ಕುರಿತು ಹೇಳಿರುವನು ಬನವಾಸಿ ದೇಶದ ಯಾವ ಬೆಟ್ಟಗಳಲ್ಲಿಯೂ, ಉದ್ಯಾನವನಗಳಲ್ಲಿಯೂ, ನೋಡುವುದಾದರೆ ಮಾವಿನ ಮರಗಳು ಫಲವತ್ತತೆಯಿಂದ ಸೊಗಸಾಗಿ ಬೆಳೆದಿರುತ್ತವೆ. ವಿಳ್ಯೆಯದೆಲೆಯ ಬಳ್ಳಿಗಳು, ಜಾಜಿ, ಮಲ್ಲಿಗೆ, ಸಂಪಿಗೆ ಗಿಡಗಳು ಕಂಡು ಬರುತ್ತವೆ. ಸ್ವರದಿಂದ ಧ್ವನಿಮಾಡುವ ಕೋಗಿಲೆ, ಜೇಂಕರಿಸುವ ದುಂಬಿಗಳು, ಬನವಾಸಿ ದೇಶದಲ್ಲಿ ಕಂಡು ಬರುತ್ತವೆ. ತದ ನಂತರ ಇನ್ನೊಂದು ಪದ್ಯದಲ್ಲಿ ಪಂಪನು

***"ತೆಂಕಣಗಾಳಿ ಸೋಂಕಿದೊಡವೊಳ್ನುಡಿಗೇಳ್ದೊಡವಿಂಪನಾಳ್ದ ಗೇ***
***ಯಂ ಕಿವಿವೊಕ್ಕೊಡಂ, ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ***
***ಪಂಗೆಡೆಗೊಂಡೊಡಂ, ಮಧುಮಹೋತ್ಸವಮಾದೊಡಮೇನನೆಂಬೆನಾ***
***ರಂಕುಸಮಿಟ್ಟೊಡಂ ನೆನೆವುದೆನ್ನಮನಂ ವನವಾಸಿದೇಶಮಂ"*[೮]**

---

[೫]. ಸಂಕ್ಷಿಪ್ತ ಕನ್ನಡ ನಿಘಂಟು, ಪು–೧೧೨೭.
[೬] ಅದೇ. ಪುಟ–೮೫೭.
[೭] ಎನ್. ಅನಂತರಂಗಚಾರ್, ಪಂಪ ಮಹಾಕವಿ ವಿರಚಿತ ಪಂಪ ಭಾರತಂ ಪು–೨೨೦.
[೮] ಅದೇ. ಪು–೨೨೧.

ದಕ್ಷಿಣ ದಿಕ್ಕಿನಿಂದ ಹಿತವಾಗಿ ಬೀಸುವ ಗಾಳಿ ಸೋಕಿದರೂ, ಒಳ್ಳೆಯ ಮಾತುಗಳನ್ನು ಕೇಳಿದರೂ ಇಂಪಾದ ಗಾನ ಕಿವಿಗೆ ಬಿದ್ದರೂ, ಅರಳಿದ ಮಲ್ಲಿಗೆಯನೂ ಕಂಡರೂ, ಶೃಂಗಾರ ಸುಖಕ್ಕೆ ಇಚ್ಛೆಯಾದರೂ ವಸಂತಸವಾದರೂ, ನನ್ನ ಮನ ಯಾವಾಗಲು ಬನವಾಸಿಯನ್ನು ನೆನೆಯುತ್ತದೆ. ಇಷ್ಟಕ್ಕೆ ನಿಲ್ಲದ ಪಂಪನ ಬನವಾಸಿ ದೇಶದ ಮೇಲಿನ ವ್ಯಾಮೋಹವು ಒಂದು ಕೈ ಮುಂದೆ ಹೋಗಿ  ಆನೆಯನ್ನು ನಿಯಂತ್ರಣದಲ್ಲಿ ಇಡಲು ಮಾವುತರು ಬಳಸುವ ಅಂಕುಶದಿಂದ ನನ್ನನ್ನು ತಿವಿದರು ನನ್ನ ನಾಡು ಕನ್ನಡ, ನನ್ನ ಭಾಷೆ ಕನ್ನಡ ನನ್ನ ತಾಯಿ ಕನ್ನಡತಿ ಎಂದು ಮತ್ತು ನನ್ನ ಮನಸ್ಸು ಯಾವಾಗಲು  ಬನವಾಸಿ ದೇಶವನೇ ನೆನೆಯುತ್ತದೆ ಎಂದು ಹೇಳಿರುತ್ತನೆ.  ಅದರಿಂದ ಬನವಾಸಿ ಸ್ಥಳನಾಮವನ್ನು ವಿಗ್ರಹ ಮಾಡಿದಾಗ 'ಬನ' 'ವನ' ಎಂಬ ಪದಗಳು  ಕಾಡನ್ನು ಸೂಚಿಸುತ್ತವೆ. ಪಂಪನ ಕಾವ್ಯದಲ್ಲಿ ಉಲೇಖವಾದ ಮರ, ಗಿಡ, ಬಳ್ಳಿ, ದುಂಬಿ ತಂಪಾದ ಗಾಳಿ, ನೀರು, ಇವು ನೈಸರ್ಗಿಕ ಲಕ್ಷಣಗಳಾಗಿವೆ. ಅದರಿಂದ ಇವು ಅತಿ ಹೆಚ್ಚು ಕಂಡು ಬರುವುದು ದಟ್ಟವಾದ ಅರಣ್ಯಪ್ರದೇಶದಲ್ಲಿ. ಆದರಿಂದ ಬನವಾಸೆ ಎಂಬುದು ಮರ ಗಿಡ ಗಳಿಂದ ಕೂಡಿದ ನಿಸರ್ಗವಾಚಿ ಸ್ಥಳನಾಮವಾಗಿದೆ ಎಂಬ ನಿರ್ಣಯಕ್ಕೆ ಬರಬಹುದು.

**ಶಾಸನಗಳಲ್ಲಿ ಬನವಾಸಿಯ ವರ್ಣನೆ**

ಇದುವರೆಗೆ ನಮಗೆ ತಿಳಿದು ಬಂದಿರುವಂತೆ, ಚುಟು–ಶಾತವಾಹನರ ಒಂದು ಪ್ರಮುಖ ನೆಲೆಯಾಗಿ, ಕದಂಬರ ರಾಜಧಾನಿಯಾಗಿ, ಕಲ್ಯಾಣಚಾಲುಕ್ಯ, ಹಾನಗಲ್ಲು ಕದಂಬರ ಉಪರಾಜಧಾನಿಯಾಗಿ ಮೆರೆದ ಬನವಾಸಿಗೆ ಸಾವಿರಾರು ವರ್ಷಗಳ ವೈಭವೋಪೇತವಾದ ಇತಿಹಾಸವಿದೆ. ಕಾಲಕ್ರಮದಲ್ಲಿ ಇದರ ಹಿರಿಮೆ ಎಷ್ಟರ ಮಟ್ಟಿಗೆ ಹೆಚ್ಚಿತ್ತೆಂದರೆ ಕೇವಲ ಊರಾಗಿದ್ದುದು, ರಾಜಧಾನಿ ನಗರವಾಗಿ, ಮಂಡಲವಾಗಿ, ನಾಡಾಗಿ, ದೇಶವಾಗಿ ಬೆಳೆದಿತ್ತು. ಕೊನೆಗೆ ಬನವಾಸಿ ಪನ್ನಿರ್ಚ್ಛಾಸಿರ (೧೨,೦೦೦) ವಾಯಿತು. "ಆರಂಕುಸವಿಟ್ಟೋಡಂ ನೆನೆವುದೆನ್ನ ಮನಂ ಬನವಾಸಿದೇಶಮಂ"[೯] ಎಂದು ಪಂಪ ನಂತಹ ಮಹಾಕವಿ ಉದ್ಘೋಷಿಸುವಂತಾಯಿತು. ಅಷ್ಟೇಅಲ್ಲ, "ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನವನದೊಳ್ ವನವಾಸಿ ದೇಶದೊಳ್"[೧೦]ಎಂದು ಆತ ಆತ್ಮೀಯವಾಗಿ ಹೇಳುವಷ್ಟು ಆಕರ್ಷಣೀಯವಾಯಿತು. ವಿಜಯನಗರದ ಪ್ರೌಢ ದೇವರಾಯನ ಆಸ್ಥಾನ ಕವಿಯಾದ ಚಾಮರಸನಂತೂ (ಕ್ರಿ.ಶ ೧೪೩೦) ಬನವಾಸಿಯ ಸೊಬಗನ್ನು, ಸೌರಂಭವನ್ನು ಮನದಣಿಯೆ ಬಣ್ಣಿಸಿದ್ದಾನೆ.[೧೧] ಅವನ ಮಾತಿನಲ್ಲೇ ಹೇಳುವುದಾದರೆ

***ಅಡಳೋಳೆವನೀಕಾಂತೆಗೊಪ್ಪುವ***
***ನದನವೋ ಶೃಂಗಾರ ಸಾರದ***
***ಸದನವೋ ಸೊಬಗಿನ ಸುಮಾನದ ಸುಖದ ನೆಲೆವೀಡೋ***
***ಸುದೆತಿರಕ್ಷೆಗಳೊಗೆದ ಚೆಲುವಂ***
***ಬುಧಿಯೋ ಪೇಳೆನೆ ಸಕಲ ಸೌರಂ***
***ಭದಲ್ಲಿ ಸೊಗಸಿಹುದಲ್ಲಿ ಬನವಸೆಯೆಂಬ ಪಟ್ಟಣವು***

---

[೯]. ಎನ್. ಅನಂತರಂಗಚಾರ್, ಪಂಪ ಮಹಾಕವಿ ವಿರಚಿತ  ಪಂಪ ಭಾರತಂ ಪುಟ–೨೨೧.
[೧೦]. ಅದೇ ಪು–೨೨೦.
[೧೧]. ಚಾಮರಸಕೃತ ಪ್ರಭುಲಿಂಗ ಲೀಲೆ.

ಇಲ್ಲಿಯ ಕೇರಿ ಕೇರಿಗಳನ್ನೂ, ಸಳರುತೋರಣಗಳನ್ನೂ, ಅಲಂಕರಗಳನ್ನೆಲ್ಲ ನೋಡಿ ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾನೆ ಕವಿ:

***ಕೇರಿ ಕೇರಿಯ ತಳಿರಿಡದ ಗುಡಿ***

***ತೋರಣಂಗಳ ಪರಿಮಳಿಸುತಿಹ***

***ಸಾರಣೆಯ ಕಾರಣೆಯ ಗಂಧೋದಕದ ಚಳೆಯಗಳ***

***ಸೌರಭದ ಪೂವಳಿಗಳಲಿ ಶೃಂ***

***ಗಾರಿಸಿದೆ ಬೀದಿಗಳ ಸೊಬಗಿನ***

***ಸಾರದಲಿ ಸಮನಿಸಿದುದತಿ ಸೌರಂಭ ಬನವಸೆಯ***

ಇಂಥ ಸೊಬಗಿನ ನಾಡಾದ ಬನವಾಸಿಯನ್ನು ಹಲವಾರು ಶಾಸನಕವಿಗಳು ಅಷ್ಟೇ ಸಮರ್ಥವಾಗಿ ಬಣ್ಣಿಸಿದ್ದು, ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಸಮೀಕ್ಷಿಸಲಾಗಿದೆ.

ಸಾಮಾನ್ಯವಾಗಿ ನಮಗೆ ತಿಳಿದು ಬಂದಿರುವಂತೆ ಬನವಾಸಿಯನ್ನು ಉಲ್ಲೇಖಿಸುವ ಅತ್ಯಂತ ಪ್ರಾಚೀನ ಶಾಸನವು ಸುಪ್ರಸಿದ್ದ ಕಾರ್ಲೆಯಲ್ಲಿದೆ.[೧೨] ಅಲ್ಲಿರುವ ಮಹಾ ಚೈತ್ಯದ ವರಾಂಡದ ಎಡಭಾಗದಲ್ಲಿ, ಗಜಶಿಲ್ಪಗಳ ಮೇಲ್ಭಾಗದಲ್ಲಿರುವ ಉಬ್ಬು ಪಟ್ಟಿಕೆಯ ಮೇಲೆ ಬರೆಯಲಾಗಿದ್ದು ಅದು ಚೈತ್ಯದ ಇತಿಹಾಸದ ಮೇಲೆ ಹೊಸ ಬೆಳಕನ್ನೂ ಚೆಲ್ಲುವಂಥದ್ದಾಗಿದೆ. ಇಡೀ ಜಂಬೂ ದ್ವೀಪದಲ್ಲೇ ಉತ್ತಮವಾದ “ಶಿಲಾಗೃಹ”ವನ್ನು ಬನವಾಸಿಯ ಒಬ್ಬ ಶೆಟ್ಟಿಯಾದ ಭೂತಪಾಲನು ನಿರ್ಮಿಸಿದ್ದು ಆತ ತನ್ನ ಹುಟ್ಟೂರನ್ನು ಆ ಕಾಲದಲ್ಲೇ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆಂಬ ಸಂಗತಿ ನಿಜಕ್ಕೂ ಮನನೀಯವಾದ್ದು “ವೆಜಯತಿತಾ (ತೂ) ಸೆಠಿಣಾಭೂತಪಾಲೇನ ಸೆಲಘರಂ ಪರಿನಿರಿಪಿತಂ ಜ(ಂ)ಬುದಿಪುಮ್ಹಿ ಉತ್ತಮ.” ಇಂಥ ಅಭಿಮಾನವು ಬನವಾಸಿಯ ಮಧುಕೇಶ್ವರ ದೇಗುಲದ ಪ್ರಾಂಗಣದಲ್ಲಿರುವ ನಾಗ ಪ್ರತಿಮೆಯನ್ನು ಕೆತ್ತಿದ ನಟಕನಿಗೂ ಬಂದಿರಬೇಕು, ಅಂತೆಯೇ ತನ್ನ ಗುರು ಬನವಾಸಿಯ ದಮೊರಕ (ಧರ್ಮರಕ್ಷ) ನೆಂದು ಗೌರವದಿಂದ ಹೇಳಿಕೊಂಡಿರುತಾನೆ. “ಸಂಜಯತಕಸ ಅಚರಿಯಸ ದಮೊರಕಸ ಸೀಸೆನ ಣಟಕೇನ ನಾಗೊ ಕತೊ” ಹೀಗೆ ಬನವಾಸಿಯ ಶೆಟ್ಟಿಗಳಿಗೆ, ಶಿಲ್ಪಿಗಳಿಗಿದ್ದ ಊರ ಅಭಿಮಾನ ಅಲ್ಲಿಯ ರಾಜರಿಗೆ ಇರದೆ ಹೋಗುತ್ತದೆಯೆ ? ಇದಕ್ಕೆ ಉತ್ತರವಾಗಿ ಈ ಕೆಳಗಿನ ಶಾಸನವನ್ನು ನೋಡಬಹುದು.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನಲ್ಲಿರುವ ಮಳವಳ್ಳಿ ಕಲ್ಲೇಶ್ವರ ದೇಗುಲದ ಎದುರಿನ ಶಿಲಾಸ್ತಂಭ ಶಾಸನದಲ್ಲಿ ಚುಟು ಶಾತವಾಹನ ರಾಜನಾದ ವಿಣ್ಹುಕಡ ಚುಟುಕುಲಾನಂದ ಶಾತಕರ್ಣಿಯು ತನ್ನನ್ನು ವೈಜಯಂತೀಪುರದ ರಾಜನೆಂದೆ ಕರೆದುಕೊಂಡಿದ್ದಾನೆ “ವೈಜಯನಿಪುರ ರಾಜಾ ಮಾನವ್ಯಸ ಗೊತ್ತೊ ಹಾರಿತೀಪುತ್ತೊ ವಿಣ್ಹು ಕಡ್ಡ ಚುಟುಕುಲಾನನ್ದ ಸಾತಕಣ್ಣೆ”[೧೩].

[೧೨]. ASWI. Inscriptions from the Cave Temples of Western India, De 1976, p. 28.

[೧೩]. EC. VII, Sk. 263.

ಅಷ್ಟೆ ಅಲ್ಲ ನಾಗಾರ್ಜುನ ಕೊಂಡದ ಬಳಿ ಸೇಟಗಿರಿಯಲ್ಲಿ ಕ್ರಿ.ಶ.೨೭೮ರ ಶಾಸನವೊಂದರಲ್ಲಿ ಅಷ್ಟ ಭುಜಸ್ವಾಮಿಯ ಶಿಲ್ಪದ ಪ್ರತಿಷ್ಠಾಪನಾಮಹೋತ್ಸವದಲ್ಲಿ ಭಾಗವಹಿಸಿದ ವಿಷ್ಣು ರುದ್ರ ಶಿವಲಾನಂದ ಸಾತಕರ್ಣಿಯ ಬನವಾಸಿಯವನೆಂದು ಹೇಳಲಾಗಿದೆ "ವನವಾಸಕೇನ [ಚ] ವಿಷ್ಣು ರುದ್ರಶಿವ [ಲಾ]ನಂದ [ಸಾತ] ಕರ್ಣಿನಾ….".[೧೪] ಹೀಗೆ ಬನವಾಸಿಯವರಲ್ಲದೆ ಬೇರೆಡೆಯಿಂದ ಬಂದ ಹೆಣ್ಣು ಮಕ್ಕಳೂ ತಮ್ಮ ಪತಿ ಬನವಾಸಿಯವನೆಂದು ಅಭಿಮಾನದಿಂದ ಹೇಳಿ ಕೊಂಡಿದ್ದುಂಟು. ಇಕ್ಷ್ವಾಕುವಂಶದ ವೀರಪುರಿಸದತ್ತನ ಪುತ್ರಿ ಕೊಡಬಲಸಿರಿಯು ತಾನು ಬನವಾಸಿಯ ಮಹಾರಾಜನ ಮಹಾದೇವಿಯೆಂದೂ ಉಲ್ಲೇಖಿಸಲ್ಪಟ್ಟಿದ್ದಾಳೆ.[೧೫] ನಾಗಾರ್ಜುನಕೊಂಡದ ಬಳಿ ಕೊಟ್ಟಂಪಲುಗು ಶಾಸನದಲ್ಲಿ ಹೀಗೆ ಹೇಳಿದ ಈಕೆಯು ತನ್ನ ಪತಿಯ ಹೆಸರನ್ನು ತಿಳಿಸದೆ, ಪತಿಯ ಊರನ್ನು ಮರೆಯದೆ ಹೇಳಿರುವುದು ನಿಜಕ್ಕೂ ಅಚ್ಚರಿಯನ್ನುಂಟು ಮಾಡುವಂಥದ್ದು.

ಶಾತವಾಹನರ ನಂತರ ಬಂದ ಬನವಾಸಿ ಕದಂಬರು (ಹೆಸರೇ ಸೂಚಿಸುವಂತೆ) ಬನವಾಸಿ ಯನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದುದು ಹೌದೆಂಬುದು ಬನವಾಸಿಯಲ್ಲೇ ಇತ್ತೀಚೆಗೆ ದೊರೆತ ಮೃಗೇಶವರ್ಮನ ತ್ರುಟಿತ ಶಾಸನದಿಂದಲೂ,[೧೬] ಇದರ ಬಳಿಯಿರುವ ಗುಡ್ನಾಪುರದ ಕದಂಬ ರವಿವರ್ಮನ ಸ್ತಂಭ ಶಾಸನದಿಂದಲೂ ಮತ್ತಿತರ ಪ್ರಾಚ್ಯಾವ ಶೇಷಗಳಿಂದಲೂ ದೃಢ ಪಟ್ಟಿವೆ.

ಆದರೆ ಕದಂಬರ ಈ ಶಾಸನಗಳಲ್ಲಾಗಲೀ, ತಾಳಗುಂದ ಸ್ತಂಭ ಶಾಸನದಲ್ಲಾಗಲೀ ಬನವಾಸಿಯ ವರ್ಣನೆ ಬರದಿರುವುದು ಸೋಜಿಗವೆಯಾಗಿದೆ. ಆದರೆ ಕದಂಬರ ಸಮಕಾಲೀನರಾದ ಬಾದಾಮಿ ಚಾಲುಕ್ಯರು ಬನವಾಸಿಯನ್ನು ಬಹಳ ಮಾರ್ಮಿಕವಾಗಿ ಕಾವ್ಯಮಯವಾಗಿ ಉಲ್ಲೇಖಿಸಿದ್ದು ಐಹೊಳೆ ಪ್ರಶಸ್ತಿಯಿಂದ ತಿಳಿದುಬರುತ್ತದೆ. ವಿಜಾಪುರ ಜಿಲ್ಲೆಯ ಹುನಗುಂದ ತಾಲೂಕು ಐಹೊಳೆಯಲ್ಲಿರುವ ಮೇಗುತಿ ದೇಗುಲದ ಪೂರ್ವಭಿತ್ತಿಗೆ ಜೋಡಿಸಿರುವ ಶಿಲಾಶಾಸನ ಪ್ರಶಸ್ತಿಯಲ್ಲಿ ಕವಿ ರವಿಕೀರ್ತಿಯು ಬನವಾಸಿಯನ್ನು ಸ್ಥಲದುರ್ಗವೆಂದೇ ಭಾವಿಸಿದ್ದನೆಂಬುದು ಆತನ ತರಂಗಮಯವಾದ ಈ ಪದ್ಯದಿಂದ ತಿಳಿಯುತ್ತದೆ:

***ವರದಾತುಂಗ ತರಂಗರಂಗ ವಿಲಸದ್ಧಂಶಿವಳೀ ಮೇಖಲಾಮ್***

***ವನವಾಸೀ ಮನ ಮೃದ್ನತ ಸುರಪುರ ಪ್ರಸ್ಪರ್ಧಿನೀಂ ಸಂಪದಾ***

***ಮಹತಾಯಸ್ಯ  ಬಲಾರ್ಣವೇನ ಪರಿತಃ ಸಂಛಾದಿತೋರ್ವಿತಲಂ***

***ಸ್ಥಲದುರ್ಗಂ ಜಲದುರ್ಗತಾಮಿನ ಗತಂ ತತ್ತತ್‌ಕ್ಷಣೇ ಪಶ್ಯತಾ*** [೧೭]

'ವರದಾ ನದಿಯ ಎತ್ತರಕ್ಕೇರುವ ಅಲೆಗಳೆಂಬ (ಕ್ರೀಡಾ) ರಂಗದ ಮೇಲೆ ಆಡುವ ಹಂಸಗಳೇ ಒಡ್ಯಾಣವಾಗಿರುವಂತಹ, ಸೌಭಾಗ್ಯದಲ್ಲಿ ಇಂದ್ರನ ಸುರಪುರವನ್ನೂ ಮೀರಿಸುವಂತಹ, ಸ್ಥಲದುರ್ಗವಾಗಿಯೂ

---

[೧೪]. EL.XXXIV, No. 30. p. 197 ff.

[೧೫]. Debala Mitra, Buddhist Monuments, Calcutta, 1971, p. 206.

[16]. Srinivasa Ritti and Gopal, B. R., (Ed.), Studies in Indian Hiatre and Culture, Dharwar, 1971, pp. 57.

[೧೭]. ರಾ.ಸ್ವಾ. ಪಂಚಮುಖಿ, ಕರ್ನಾಟಕ ಇತಿಹಾಸ, ಪುಟ–೧೨೦

ಸೈನ್ಯಸಮುದ್ರದಿಂದ ಆವರಿಸಲ್ಪಟ್ಟ ಭೂಪ್ರದೇಶ ದಿಂದಾಗಿ ನೋಟಕರಿಗೆ ಕೂಡ 'ಇದೇನು ಜಲದುರ್ಗವಾಗಿ ಕಾಣುವುದಲ್ಲ' ಎಂದು ಭಾವಿಸುವಂತಹ ಬನವಾಸಿಯಾಗಿದೆ' ಎಂದು ಕವಿ ಬಣ್ಣಿಸಿರುವುದು ಯಥೋಚಿತವಾಗಿದೆ.

ರಾಷ್ಟ್ರಕೂಟ–ಕಲ್ಯಾಣ ಚಾಲುಕ್ಯರ ಕಾಲದಲ್ಲಂತೂ ಬನವಾಸಿಯು ಬನವಾಸಿ ಮಂಡಲವಾಗಿ, ನಾಡಾಗಿ, ದೇಶವಾಗಿ, ಪನ್ನಿರ್ಚ್ಛಾಸಿರವಾಗಿ ಹೆಚ್ಚಿನ ಹಿರಿಮೆಯನ್ನು ಪಡೆದದ್ದು ಹಲವಾರು ಶಾಸನಗಳಿಂದ ತಿಳಿದುಬರುತ್ತದೆ. ಬನವಾಸಿ ನಾಡಿನ ಸೊಬಗನ್ನು ಬಣ್ಣಿಸುವುದರಲ್ಲಿ ಈ ಕಾಲದ ಶಾಸನ ಕವಿಗಳು ಒಬ್ಬರಿಗಿಂತ ಮತ್ತೊಬ್ಬರು ಮೇಲು. ಕೆಲವೊಮ್ಮೆ ಉತ್ಪ್ರೇಕ್ಷೆಯಿದ್ದಿರಬಹುದೆಂದು ಸಂದೇಹ ಬರಬಹುದಾದರೂ ಆ ಕಾವ್ಯಮಯ ಬಣ್ಣನೆಗೆ ನಾವು ಬೆರಗಾಗದೆ ಇರಲಾರೆವು. ಪಂಪ ಪ್ರಶಂಸೆಯನ್ನೂ ಬಹುಶಃ ಮೀರಿಸು ವಂತಹ ಶಾಸನ ಕವಿಗಳ ಬನವಾಸಿ ವರ್ಣನೆಗಳಲ್ಲಿ ಕೆಲವನ್ನು ನೋಡಬಹುದು.

ಸುಮಾರು ಕ್ರಿ.ಶ. ೧೧೦೦ರ ದಾವಣಗೆರೆ ಶಾಸನದಲ್ಲಿ ಬನವಾಸಿ ಸೌಂದರ್ಯ, ಕಣ್ಣಿಗೆ ಕಟ್ಟುವಂತೆ ವರ್ಣಿತವಾಗಿದೆ.[೧೮] ಹರಿಹರದೇವರಿಗೆ ದತ್ತಿಬಿಟ್ಟ ವಿಚಾರವನ್ನು ತಿಳಿಸುವ ಈ ಶಾಸನದಲ್ಲಿ ಬನವಾಸಿ ಮಂಡಲವನ್ನು ಸುಖದಾಗರ, ಸಿರಿ ಹುಟ್ಟಿದ ಕ್ಷೀರಸಾಗರವೆಂದು ಬಣ್ಣಿಸಲಾಗಿದೆ.

ಧಾರವಾಡ ಜಿಲ್ಲೆಯ ಹಿರೆಕೇರೂರು ತಾಲೂಕಿನ ಕಾಗಿನಲೆಯಲ್ಲಿರುವ ಕ್ರಿ.ಶ. ಸು ೧೧೨೧ರ ಶಾಸನ ಗೋವಿಂದರಾಜ ದಂಡಾಧೀಶನು ಬನವಸೆದೇಶದ ರಾಜ್ಯಪಾಲನಾಗಿದ್ದಾಗ ಬನವಾಸೆ ನಾಡು ಹೇಗಿತ್ತೆಂಬುದನ್ನು ವರ್ಣಿಸುತ್ತದೆ.[೧೯] 'ಬನವಾಸ ದೇಶವೆಂಬ ವನಿತೆ ಶ್ರೀವನಿತೆಯಾಗೆ ಬಳಸಿದ ನಂದನಾಳಿಕರ ಮೊಪ್ಪುವ ಪುಷ್ಪಲತಾಳಿ ಕೂಡೆ ವುಂಡುಳಿಪ ಶುಕಾಳಿ ಬಣ್ಣಿಪ ಪಿಕಾಳಿತಜ (ದಿರದು) ನ್ಮದಾಳಿ ಕಣ್ಗೊಳಿಸುವ ಗನಕಾಳಿ ಸುಳಿದಾಡುವ ತೆಂಕಣಗಾಳಿ' ಎಂದು ವರ್ಣಿಸುವಲ್ಲಿ ಬನವಾಸೆಯ ನಿಸರ್ಗದ ಸೌಂದರ್ಯ ವ್ಯತ್ತಾನು ಪ್ರಾಸಗಳಲ್ಲಿ ರಂಜಿಸುತ್ತದೆ. ಮುಂದಿನ ಗಿಳಿಸೋವ ಪಾಮರೀಜನದ ವರ್ಣನೆ ಸವಿದಷ್ಟೂ ಸೌಂದರ್ಯ ಹೊರಸೂಸುವಂತಿದೆ. 'ತುಂಬಿ ಕುಂತಳಕ್ಕೆ ಸಿರಂ ನುಡಿಗೆ ಅಂಚೆಯಾನ ರಂಜನಕೆ ಶುಕಂ ಬಿರಾಜಿನ ಅಧರಕ್ಕೆ' ಎಳಸುತ್ತಿದ್ದರೆ ಯೌವ್ವನದಿಂದ ಕೂಡಿದ ಆ ಮುಗ್ಧಯರ ಚೆಲ್ವು ಸವಿಭ್ರ ಮಭ್ರಮಣೆಯಿಂದ ರಂಜಿಸುತ್ತಿವೆ :

***ಬನವಾಸೆ ದೇಶಮೆಂಬೀ ವನಿತೆ ಶ್ರೀವನಿತೆಯಾಗೆ (ಆ ನಾಡೆ ಮಹಿಮೆ***
***ಬಳಸಿದ ಸಂದನಾಳಿಕೆರೆ ವೊಪ್ಪುವ ಪುಷ್ಪ ಲತಾಳಿ ಕೂಡೆ ವುಂಡಳಿಪ***
***ಶುಕಾಳಿ ಬಗ್ಗಿಪ ಪಿಕಾಳಿ ತೆಱಿಶಿ (ದಿರದು) ನ್ಮದಾಳಿ ಕಣ್ಗೊಳಿಸುವ***
***ಗನ್ದ ಕಾಳಿ ಸುಳಿದಾಡುವ ತೆಂಕಣಗಾಳಿ ದೇಸೆಯಂ ತಳದು ನಿರಂತ***
***ರಂ ನಿಮಿರ್ದ್ದು ರಂಜಿಸುಗಂ ಬನವಾಸೆ ದೇಶದೊಳು***
***ಜಿನಗುವ ತುಂಬಿಕುಂತಳಕ್ಕೆ ಪಿಕಂನುಡಿಗಂಟೆಯಾನರಂಜನ ಶುಕಂ***

[೧೮]. EC. IX Dg. 35.

[೧೯]. SII. XVIII. p. 137. No. 117 (Bk. No. 20 of 1933-34).

*ವಿರಾಜಿಪಧರಕ್ಕೆಳಸುತ್ತಿರೆ ಕೊರ್ಬ್ಬಿ ತೋರ್ಪ್ಪ ಜೌವನವನವೊಪ್ಪು ವಂತಳೆ ಯೆಶೋಭೆಮಿ*

*ಗಲುರಿಳಿಸೋವ ಪಾಮರೀ ಜನದ ಸವಿಭ್ರಮಂ ಭ್ರಮಣೆ ರಂಜಿಸುಗುಂ*

*ಬನವಾಸೆ ದೇಶದೊಳು ದೇಸೆವೊಡೆದೊಪ್ಪು ವೀ ಬನವಾಸೆಯೊಳು....*

ನಿಸರ್ಗ ಜೀವಿಗಳ ಸೌಂದರ್ಯದೊಂದಿಗೆ ಸಾಮರಸ್ಯ ಹೊಂದಿದ ಪಾಮರಿಯರ ಯೌವ್ವನದ ಸಾರ್ಥಕ ವರ್ಣನೆಗಳಿಂದ ಶಾಸನವೇ ಯೌವ್ವನದ ಭರಿತವಾಗಿದೆ. ಇಂತಹ ದೇಸೀ ದೃಶ್ಯಗಳಿಂದಲೇ ಬನವಾಸೆ ದೇಸೆವೊಡೆದು ಒಪ್ಪುತ್ತಿದೆ ಎಂದಿದ್ದಾನೆ ಶಾಸನ ಕವಿ.

ಚಾಲುಕ್ಯ ಜಗದೇಕಮಲ್ಲ II ನೆ ಸಾಮಂತ ದಂಪತಿಗಳ ಸ್ತುತಿಯಿರುವ ಕ್ರಿ.ಶ. ೧೧೪೫ರ ಸೊರಬದ ಶಾಸನದಲ್ಲಿ "ಭೂದೇವಿಯ ಕುಂತಳದಂತಿರುವ ಕುಂತಳ ದೇಶಕ್ಕೆ ಆದರಣೀಯವಾದುದು ಬನವಸೆದೇಶ" ಎಂಬ ಹೊಗಳಿಕೆಯ ಜೊತೆಗೆ ಇದು "ಭೋಗಕ್ಕೆ ಆಗರ, ಸೌಖ್ಯ ಸಾಗರ, ಆಹ್ಲಾದಕರ ನಿರಂತರ ವಿಳಾಸದಿಂದ ಕೂಡಿದ ಲಕ್ಷ್ಮೀ ಆವಾಸಸ್ಥಾನ" ಎಂದು ಹೆಮ್ಮೆಯಿಂದ ಎದೆ ತುಂಬ ಬಣ್ಣಿಸಲಾಗಿದೆ[೨೦]

*ವರರತ್ನಾಕರದಿಂದಳಂಕರಿಸಿ ಮೆಯ್ವೆರ್ಚ್ಚಿರ್ದ ಭೂದೇವಿಗಾ*

*ದೆರದಿಂ ಕುಂತಳದಂತೆ ಕುಂತಳ ಸುದೇಂತೋರ್ಕುಮಾದೇಶಕಾ*

*ದರಣೀಯಂ ಬನವಾಸಿದೇಶಮದುಭೋಗಕ್ಕಾಗರಂ ಸೌಖ್ಯಸಾ*

*ಗರಮಾಹ್ಲಾದಕರ ನಿರಂತರ ವಿಳಾಸವಾಸ ಲಕ್ಷ್ಮೀಕರಂ*

ಚಾಲುಕ್ಯ ರಾಜ ನೂರ್ಮಡಿ ತೈಲನ ಆಳ್ವಿಕೆಯ ಕಾಲದಲ್ಲಿ ಮಹಾದೇವ ದಂಡ ನಾಯಕನ ದತ್ತಿ ವಿಚಾರವನ್ನು ತಿಳಿಸುವ ಕ್ರಿ.ಶ. ಸು. ೧೧೬೫ರ ಸೊರಬ ಶಾಸನ ಬನವಾಸೆ ದೇಶವನ್ನು ಚಂಪಕಮಾಲೆಯಲ್ಲಿ ಈ ರೀತಿಯಾಗಿ ವರ್ಣಿಸುತ್ತದೆ :

*ಫಲಭರದಿಂ ಮನಂಗೊಳಿಪ ಪೂಗವನಂ ವನದೊಳ್ ಸರೋಜಲಂ*

*ಜಲದ ಪೊನಲ್ಗಳಿಂ ಬೆಳೆದು ಕತ್ತಲಿಸಿರ್ಪೆಲೆವಳ್ಳಿ ಬಳ್ಳಿ ಗೊಂಡುಲಿವ*

*ಪಿಕಂ ಪಿಕಧ್ವನಿಗಳಿಂ ನಲಿದಾಡುವಸಂಗನಂಗನಾಕುಲಮದೆ*

*ಲಕ್ಷ್ಮೀ ಲಕ್ಷ್ಮಿಗೆ ಸಮೃದ್ಧಿಕರಂ ಬನವಾಸಿದೇಶದೊಳ್*[೨೧]

ಲಕ್ಷ್ಮೀಗೆ ಸಮೃದ್ಧಿಕರವೆಂದು ಬಣ್ಣಿಸುವ ಈ ಪದ್ಯದಲ್ಲಿ ಏಕಾವಳಿ ಅಲಂಕಾರವೂ ಕೂಡ ಸೊಗಸಾಗಿ ಸಮೃದ್ಧಿ ಕರವಾಗಿಯೇ ಬಂದಿದೆ.

ಕಳಚುರ್ಯರಾಜ ರಾಯಮುರಾರಿ ಸೋಮದೇವನ ಆಳ್ವಿಕೆಯಲ್ಲಿ ನಾಳ್ಪ್ರಭು ತಾರಕಗೌಡನು ಶಿವಾಲಯವೊಂದಕ್ಕೆ ದಾನಬಿಟ್ಟ ವಿಷಯದ ವರ್ಣನೆಯಿರುವ ಕ್ರಿ.ಶ. ೧೧೬೮ರ ಸೊರಬದ ಶಾಸನವೊಂದರಲ್ಲಿ ಪ್ರಾಸಂಗಿಕವಾಗಿ ಬನವಾಸೆ ಮಂಡಲದ ವರ್ಣನೆ ಬರುತ್ತದೆ. [೨೨] 'ಸಾಗರದಿಂದ

---

೨೦. EC. VIII. Sb. 138.

೨೧. ಅದೇ. Sb. 277.

೨೨. ಅದೇ. Sb. 286.

ಸುತ್ತುವರಿಯಲ್ಪಟ್ಟ ಧರಾರಮಣಿಯ ಘನಸ್ತನಾಂಭೋಗವೆ ಇದು' ಎಂಬಂತೆ ಸಕಲ ಸಮೃದ್ಧಿಗಳಿಂದ ಕೂಡಿದ ವಿದಿತವಿಸ್ತೃತ ಸಾರತರಾಗ್ರಹಾರದಿಂದಲೂ ನಾಗರಖಂಡ ಪತ್ರಪರಿವೇಷ್ಟನದಿಂದಲೂ ಜನನೇತ್ರ ಪುತ್ರಿಕಾರಾಗಮನಿತ್ತು ಮನಸ್ಸುಖವನ್ನುಂಟು ಮಾಡುತ್ತದೆ ಬನವಾಸೆ ಮಂಡಲ. ಉತ್ಪಲಮಾಲೆಯಲ್ಲಿ ವರ್ಣಿತವಾದ ಈ ಶಾಸನ ಪದ್ಯ ಬನವಾಸಿಯ ಸಮೃದ್ಧಿ, ಸಂಸ್ಕೃತಿಗಳಿಗೆ ಸಾಕ್ಷಿಯಾಗಿದೆ.

ಧಾರವಾಡ ಜಿಲ್ಲೆಯ ರಾಣಿಬೆನ್ನೂರು ತಾಲೂಕಿನ ನದಿಹರಳಹಳ್ಳಿಯಲ್ಲಿ ದೊರೆತ ಕ್ರಿ.ಶ. ೧೧೬೮ರ ಶಾಸನ,[೨೩] ಸೊರಬದ ಕ್ರಿ.ಶ. ೧೧೭೦ರ ಶಾಸನ,[೨೪] ಮತ್ತು ದಾವಣಗೆರೆಯ ಕ್ರಿ.ಶ.೧೧೮೦ರ ಶಾಸನಗಳು[೨೫] ಬನವಸೆನಾಡನ್ನು ಸೊಗಸಾಗಿ ವರ್ಣಿಸುತ್ತವೆ. ಇವುಗಳಿರುವ ಸ್ಥಳ–ಕಾಲಗಳು ಭಿನ್ನವಾದರೂ ವಿಷಯ, ಅದನ್ನು ಬಣ್ಣಿಸುವ ರೀತಿ ಒಂದೇ ಬಗೆಯದು 'ವನರುಹವನ, ವನರುಹವನಗಳ ಮಧುವಿನಿಂದ ಮುದಿತಗೊಂಡ ಅಳಿಮೊಳೆಗಳು, ಅಳಿಮೊಳೆಗಳ ದೊರೆತದಿಂದ ಹೃದ್ಯವಾದ ಉದ್ಯಾನ' ಇಂಥವುಗಳಿಂದ ಆ ಜನಪದ ಉದ್ಯಾನ ಜೀವನದ ಜೋಕಾಲಿ ಆಡುತ್ತಿತ್ತು. ಕೋಗಿಲೆಗಳ ಇಂಚರ, ಗಿಳಿಗಳ ಬಳಗ, ತಂಗಾಳಿ ಎಳೆನೀರುಗಳಿಂದ ಸಕಳೇಂದ್ರಿಯಗಳಿಗೆ ವಿಶೇಷ ತೃಪ್ತಿದೊರೆಯುತ್ತಿತ್ತು. ಕೋಗಿಲೆಗಳ ಇಂಚರದಿಂದ ಮಾವಿನ ಬನಗಳು, ಗಿಳಿವಿಂಡಿನಿಂದ ಶಾಳಿವನ, ಮುಂತಾದವು ಕಣ್ಣಿಗೆ ಸುಂದರವಾಗಿ ಕಾಣುತ್ತಿದ್ದವು. ಅದರಲ್ಲಿಯೂ ಮರಾಳಗಳಿಂದ ವನಜವನ, ಅತ್ಯಂತ ಚೆಲುವಿನಿಂದ ಕಂಗೊಳಿಸುತ್ತಿತ್ತು.

ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನ ಗುತ್ತಲದಲ್ಲಿಯ ಕ್ರಿ.ಶ. ೧೧೮೯ರ ಶಾಸನ ಬನವಸೆ ನಾಡನ್ನು ಹೀಗೆ ಬಣ್ಣಿಸುತ್ತದೆ :

***ಎಸೆಗುಂ ಕುಂತಶದೊಳ್ವನನಸೆನಾಡದಱಂ ಸಪನೇನನೆಂಬೆ***

***ರಸದೆ ಮಳೆ ಸುರಿಯೆ ಕಾರುಂಬ ಸಂತನುಂ ....***

***ವದಱ ನಂದನ ತಲೆಯೊಳ್ ಗಿಳಿಗಳ ನೋಡಿಪಕಳೆ ಕೋಕಿಳಗಳಂ ನುಡಿ***

***ಯೆ....ಗಳಂ ಮಂದ್ರರ ಮಂಗಳಂ... ಲತೆಗಳ ನಾಡಿಪ ಬಿನದ***

***ಮತ್ತೆ ಬನವಸೆ ನಾಡೊಳ್***[೨೬]

ಅಲ್ಲಲ್ಲಿ ತ್ರುಟಿತಗೊಂಡಿರುವ ಈ ಶಾಸನ ಬನವಸೆ ನಾಡನ್ನು ಅತ್ಯಂತ ಆತ್ಮೀಯತೆ ಯಿಂದ ಮತ್ತು ಹೆಮ್ಮೆಯಿಂದ ಬಣ್ಣಿಸಿದಂತೆ ತೋರುತ್ತದೆ.

ಕ್ರಿ.ಶ. ೧೧೯೮ರ ಸುಮಾರಿನ ಸೊರಬದ ಶಾಸನವೊಂದರಲ್ಲಿ, "ಪೂರ್ಣತಟಾಕಗಳಿಂದ ಬೆಳೆದ ನಾನಾ ಶಾಳಿಕೇದಾರದ್ದೊಲ ವಾರಿಜಷಂಡ ಪರಿಮಳ ಭ್ರಾಂತಳಿಮಾಳೆ, ಪುಷ್ಪಲತಾ ಸಂಕುಳ, ಫಳಭರಿತ ಚೂತಾದಿ

---

[೨೩]. SII. XVIII, No. 180;

[೨೪]. EC. VIII, Sb. 345;

[೨೫]. EC. IX, Dg. 44.

[೨೬]. ಅದೇ. XVIII, No. 297.

ವೃಕ್ಷಗಳಿಂದ ಎತ್ತೆತ್ತಲೂ ಬನವಾಸೆ ದೇಶ ಮನ್ಮಥನಿಗೆ ನೆಲೆಯಾಗಿದೆ" ಎಂದು ಅದರ ಸಮೃದ್ಧಿಯನ್ನು, ನಯನ ಮನೋಹರತೆ ಯನ್ನು ಎತ್ತಿ ತೋರಿಸಲಾಗಿದೆ.[೨೭]

ಕ್ರಿ.ಶ. ೧೨೦೮ರ ಸೊರಬದ ಶಾಸನದಲ್ಲಿ 'ಭರತ ಶ್ರೀ ಭೂಷಣದಂತಿರುವ ಕುಂತಳ ದೇಶದಲ್ಲಿ ಬನವಾಸದೇಶ ನಾಯಕಮಣಿಯಂತೆ ವಿಶೇಷವಾಗಿ ಶೋಭಿಸುತ್ತಿದೆ' ಎಂದು ಮನಸಾರೆ ಹೊಗಳಲಾಗಿದೆ.[೨೮]

ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನ ಕನವಳ್ಳಿಯಲ್ಲಿ ದೊರೆತ ಕ್ರಿ.ಶ.ಸು ೧೨೩೩ರ ಶಾಸನದ',[೨೯] "ಬನವಾಸಿಯಲ್ಲದ ನಾಡು ನಾಡೆಯುಂ ಸೊಗಯಿಸದು" ಎಂಬ ತೀರ್ಮಾನವನ್ನು ಹೊಂದಿದೆ. "ಸುರಭವನ, ಉದಧಿಯನೇಡಿಸುವ ತಟಾಕ, ಅಮರವನ ಮಹಿಮೆಯನಳ್ಕಾಡಿಸುವ ಬನ" ಇವುಗಳಿಂದ ಆ ಮಾತಿಗೆ ಪುಷ್ಟಿ ಬಂದಿದೆ. ಅಷ್ಟೇ ಅಲ್ಲದೆ ಅಲ್ಲಿಯ ಧೇನುಗಳೆಲ್ಲ ಕಾಮಧೇನು, ಕಾನನಗಳೆಲ್ಲ ಕಲ್ಪ ಬೂರುಹಗಳಾಗಿರುವಾಗ ಅದೇನೆಂದು ವರ್ಣಿಸಲಿ' ಎಂಬ ಶಾಸನ ಕವಿಯ ವರ್ಣನೆಯೂ, ವರ್ಣಿಸಿಲಾದ ತೃಪ್ತಿ ಹೊಂದಲಾರದ ಕೊರಗೂ ಕಾವ್ಯಕ್ಕೆ ಮೆರುಗನ್ನು ಕೊಟ್ಟಿದೆ.

ಹೀಗೆ ಸುಮಾರು ಕ್ರಿ.ಶ. ೧–೨ ಶತಮಾನದಿಂದ ಕ್ರಿ.ಶ. ೧೨೩೩ವರೆಗಿನ ಶಾಸನಗಳಲ್ಲಿ ಬಂದಿರುವ ಬನವಾಸೆಯ ವರ್ಣನೆಗಳ ಮೇಲಿಂದ ಆ ಕಾಲದಲ್ಲಿ ಬನವಸೆನಾಡು ಸಂಸ್ಕೃತಿಯ ಆಗರವೂ ಸಮೃದ್ಧಿ ಸಾಗರವೂ ಆಗಿದ್ದು, ಸಕಲ ಸುಖಗಳ ಬೀಡಾಗಿತ್ತೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಇಂತಹ ಪ್ರಾಚೀನ ಕದಂಬ ಸಾಮ್ರಾಜ್ಯದಲ್ಲಿ ವೈಭವದ ಶಿಖರಕ್ಕೇರಿದ್ದ ಬನವಾಸಿ, ಆ ಸಾಮ್ರ್ಯಜ್ಯದ ಪತನದ ನಂತರ, ಮುಂದೆಮದೂ ಉತ್ತುಂಗಕ್ಕೇರಿಲ್ಲ. ಇಂದೆಲ್ಲವೂ ಗತಕಾಲದ ವೈಭವದ ಚರಿತ್ರೆಯಾಗಿ ಮಾತ್ರ ಉಳಿದಿದೆ.

**ಪರಾಮರ್ಶನ ಗ್ರಂಥಗಳು**


- ಬಸವರಾಜು, ಎಲ್. (1999). *ಸರಳ ಪಂಪಭಾರತ.* ಗೀತ ಬುಕ್ ಹೌಸ್.
- ಚಿದಾನಂದಮೂರ್ತಿ, ಎಂ. (1966). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಸಪ್ನ ಬುಕ್ ಹೌಸ್.
- ಹಿರೇಮಠ, ಬಿ.ಆರ್. (1986). *ಶಾಸನಗಳಲ್ಲಿ ಕರ್ನಾಟಕದ ವರ್ತಕರು.* ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ.
- ಕಲಬುರ್ಗಿ, ಎಂ.ಎಂ. (1994). *ಕರ್ನಾಟಕ ಕೈಫಿಯತ್ತುಗಳು.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ
- ಕಲಬುರ್ಗಿ, ಎಂ.ಎಂ. (2004). ಮಾರ್ಗ ಸಂಪುಟ 4. ಸಪ್ನ ಬುಕ್ ಹೌಸ್.


[೨೭]. EC. VIII, Sb. 140.

[೨೮]. ಅದೇ. Sb. 28.

[೨೯]. SII. XVIII.No. 301.

- ಕುಂದಣಗಾರ ಕೆ.ಜಿ. (ಸಂ.). *ಪಂಪ ಮಹಾಕವಿ ವಿರಚಿತಂ ಆದಿಪುರಾಣಂ.* ಅನಂತ ಅಣ್ಣಾರಾವ ಚೌಗುಲೆ ಪ್ರಕಾಶಕರು.
- ಲಕ್ಷ್ಮಣ ತೆಲಗಾವಿ. (2004). *ಕರ್ನಾಟಕ ಸಂಸ್ಕೃತಿ ಚರಿತ್ರೆ (ಸಂಪುಟ–1).* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- ಪಂಚಮುಖಿ, ರಾ.ಸ್ವಾ. (2007). *ಕರ್ನಾಟಕದ ಇತಿಹಾಸ (ಸಂಪುಟ–1).* ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ.
- ತಿಪ್ಪೇರುದ್ರಸ್ವಾಮಿ, ಎಚ್. (2015). *ಕರ್ನಾಟಕ ಸಂಸ್ಕೃತಿಯ ಸಮೀಕ್ಷೆ,* ಡಿ.ವಿ.ಕೆ.ಮೂರ್ತಿ